ಆ) ಈ ಕಲ್ಮಶ ನೀರನ್ನು ಸಂಸ್ಕರಣೆ ಮಾಡುವ ವಿಚಾರ ಸರ್ಕಾರದ ಮುಂದೆ ಇದೆಯೇ. ಇದಕ್ಕಾಗಿ ಸರ್ಕಾರ ಕೈಗೊಮಡಿರುವ ಕ್ರಮಗಳೇನು

ಇ) ಹಿರೇಕೆರೆ ಯೋಜನೆಯೊಂದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿರುವುದು ನಿಜವೇ. ಈ ಪ್ರಸ್ತಾವನೆ ಹಾಲಿ ಯಾವ ಹಂತದಲ್ಲಿದೆ?

ಡಾ॥ ಎ ಬಿ ಮಾಲಕ ರೆಡ್ಡಿ (ವೈದ್ಯಕೀಯ ಶಿಕ್ಷಣ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಹೌದು

ಆ) ಹೌದು

ರೂ 404 75 ಲಕ್ಷ ಅಂದಾಜು ವೆಚ್ಚದ ಈ ಕೆರೆ ಅಭಿವೃದ್ಧಿ ಯೋಜನಾ ವರದಿಯನ್ನು ಭಾರತ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿದೆ

ಇ) ಹೌದು

ಕೇಂದ್ರ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ

ಚಿತ್ರಕಲಾ ಪದವೀಧರ ನಿರುದ್ಯೋಗಿಗಳ ಸಮಸ್ಯೆ

120 (504) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಚಿತ್ರಕಲಾ ಶಾಲೆಗಳು ಎಷ್ಟಿವೆ ಚಿತ್ರಕಲಾ ಶಿಕ್ಷಕರ ಕೊರತೆ ಎಷ್ಟಿವೆ (ಜಿಲ್ಲಾವಾರು ವಿವರ ನೀಡುವುದು)

ಆ) ರಾಜ್ಯದಲ್ಲಿರುವ ಚಿತ್ರಕಲಾ ಪದವೀಧರ ನಿರುದ್ಯೋಗಿಗಳ ಸಂಖ್ಯೆ ಎಷ್ಟು

ಇ) ಶಾಲೆಗಳಲ್ಲಿ ಚಿತ್ರಕಲಾ ವಿಷಯ ಅಗತ್ಯವಿರುವುದನ್ನು ಸರ್ಕಾರ ಮನಗಂಡಿದೆಯೇ ಇದ್ದಲ್ಲಿ, ಯಾವ ಕ್ರಮ ಕೈಗೊಂಡಿದೆ

ಈ) ಚಿತ್ರಕಲಾ ಪದವೀಧರ ನಿರುದ್ಯೋಗಿಗಳ ಸಮಸ್ಯೆಯ ಪರಿಹಾರಕ್ಕೆ ಸರ್ಕಾರ ಯೋಜನೆ ರೂಪಿಸಿದೆಯೇ?

ಪ್ರೋ॥ ಬಿ ಕೆ ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ರಾಜ್ಯದಲ್ಲಿ 80 ಚಿತ್ರಕಲಾ ಶಾಲೆಗಳು ಇರುತ್ತವೆ 168 ಚಿತ್ರಕಲಾ ಶಿಕ್ಷಕರ ಕೊರತೆ ಇರುತ್ತದೆ (ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ)

ಆ) ರಾಜ್ಯದಲ್ಲಿ 4511 ಚಿತ್ರಕಲಾ ಪದವೀಧರ ನಿರುದ್ಯೋಗಿಗಳು ಇರುತ್ತಾರೆ (ಜುಲೈ 2003ರ ಉದ್ಯೋಗ ವಿನಿಮಯ ಕಛೇರಿಯ ಮಾಹಿತಿ ಪ್ರಕಾರ)

ಇ) ಹೌದು ಈ ದಿಸೆಯಲ್ಲಿ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಚಿತ್ರಕಲಾ ಹುದ್ದೆಗಳನ್ನು ನೇಮಕಾತಿ ಮೂಲಕ ಭರ್ತಿ ಮಾಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ

ಈ) ಹೌದು ನಿರುದ್ಯೋಗಿ ಸಮಸ್ಯೆಯನ್ನು ನಿವಾರಿಸಲು ಹಂತ ಹಂತವಾಗಿ ಅಗತ್ಯವಿರುವಷ್ಟು ಹುದ್ದೆಗಳನ್ನು ಭರ್ತಿ ಮಾಡುವ ಮೂಲಕ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಕ್ರಮ ವಹಿಸಲಾಗುತ್ತದೆ